


"Dear me!..." ಮುದುಕಿ ಉದ್ಗರಿಸಿದಳು. "ಕಾಲವೆನ್ನುವುದು ಹೇಗೆ ಸರಿಯುತ್ತದೆ ಅನ್ನುವುದು ಗೊತ್ತೇ ಆಗುವುದಿಲ್ಲ, ಅಲ್ವೇ ಮಿಸ್ಟರ್ ವಿಲ್ಕಿನ್ಸ್?"

"ವಿಲ್ಕಿನ್ಸ್ ಅಲ್ಲ ಅಜ್ಜಿ. ವೀವರ್! W–E–A–V–E–R."

"ದೇವರೇ! ಇದೆಂತ ಮರೆವಪ್ಪ! ಈಗ ಕೇಳಿದ್ದು ಈಗ ನೆನಪಾಗೊಲ್ಲ ಅಂದ್ರೆ! ನನಗೆ ಕ್ಷಮಿಸು ಮಗ."

"ಇದರಲ್ಲೇನೋ ಗೊಂದಲವಿದೆ ಅಜ್ಜಿ."

"ನನಗೆ ಯಾವ ಗೊಂದಲನೂ ಕಾಣಿಸ್ತಾ ಇಲ್ಲ ಮಗ."

"ಈ ಹೆಸರುಗಳು ನನಗೆ ಪರಿಚಿತವಾಗಿರುವಂತೆ ಭಾಸವಾಗುತ್ತಿದೆ. ಹೇಗೆ, ಏಕೆ ಎಂದು ಒಂದೂ ಗೊತ್ತಾಗ್ತಾ ಇಲ್ಲ. ಈ ಇಬ್ಬರಿಗೂ ಏನೋ ಸಂಬಂಧವಿರುವಂತೆ ಭಾಸವಾಗುತ್ತಿದೆ."

"ನೀನು ಒಂದು ನಿರ್ಧಾರಕ್ಕೆ ಬರುವ ವರೆಗೆ ಇಲ್ಲಿ ಬಾ ಮಗ, ಕೂತುಕೊ. ಒಂದು ಬಿಸಿ ಬಿಸಿ ಟೀ ಮತ್ತು ಈ ಜಿಂಜರ್ ಬಿಸ್ಕತ್ತುಗಳನ್ನು ತಿನ್ನುತ್ತಾ ಇರು. ಜ್ಞಾಪಕಕ್ಕೆ ಬರಬಹುದು."

"ನೀವು ವೃಥಾ ತೊಂದರೆ ತೆಗೆದುಕೊಳ್ಳಬೇಡಿ ಅಜ್ಜಿ." ಪಿಯಾನೋಗೆ ಒರಗಿ ನಿಂತಿದ್ದ ಬಿಲ್ಲಿ ಮುದುಕಿಯನ್ನೇ ತದೇಕ ದೃಷ್ಟಿಯಿಂದ ನೋಡತೊಡಗಿದ. ಮುದುಕಿಯ ಬಿಳಿ ವರ್ಣದ ಕೈಬೆರಳುಗಳ ಮೇಲೆ ಗಾಢ ಕೆಂಪು ಬಣ್ಣದ ಉಗುರುಗಳು ಎದ್ದು ಕಾಣುತ್ತಿದ್ದವು.

"ಈ ಹುಡುಗರ ಹೆಸರುಗಳನ್ನು ನಾನು ಪೇಪರಿನಲ್ಲಿ ಓದಿರಬೇಕು... ತಡೀರಿ, ಈಗ ಹೇಳುತ್ತೇನೆ... ಮುಲ್ಸ್ ಹಾಲ್ಲೆಂಡ್... ಹಾಂ, ಈಗ ನೆನಪಿಗೆ ಬಂತು. ಇವನು ಈಟೋನ್ ಕಾಲೇಜು ವಿದ್ಯಾರ್ಥಿ. ಪಶ್ಚಿಮದ ಪ್ರದೇಶಗಳಲ್ಲಿ ಟ್ರೆಕ್ಕಿಂಗಿಗೆ ಹೊರಟವನು!..."

"ನಿನ್ನ ಟೀಗೆ ಹಾಲು ಬೇಕಾ ಮಗ? ಸಕ್ಕರೆ ಎಷ್ಟು ಬೇಕು?" ಅವನ ಮಾತನ್ನು ಅಜ್ಜಿ ಕೇಳಿಸಿಕೊಂಡಂತಿರಲಿಲ್ಲ. ಅವಳ ಸುಂದರ ನಗು ಅವನನ್ನು ಆಹ್ವಾನಿಸುತ್ತಿತ್ತು.

"ಆಗ ಆಕಸ್ಮಿಕವಾಗಿ..." ಬಿಲ್ಲಿಯ ಗ್ಯಾನ ಮುದುಕಿಯ ಕಡೆಗೆ ಇರಲಿಲ್ಲ.

"ಮುಲ್ಸ್ ಹಾಲ್ಲೆಂಡ್ ಇಲ್ಲಿಗೆ ಬರುವಾಗ ಈಟೋನ್ ಕಾಲೇಜ್ ವಿದ್ಯಾರ್ಥಿಯಾಗಿರಲಿಲ್ಲ. ಅವನು ಕೇಂಬ್ರಿಜ್‌ನ ಅಂಡರ್ ಗ್ರ್ಯಾಜುಯೆಟ್‌ನಾಗಿದ್ದ. ಟೀ ತಣ್ಣಗಾಗುತ್ತಿದೆ. ಬಾರಪ್ಪ!" ಮುದುಕಿ ಸೋಫಾದ ಮೇಲೆ ಕುಳಿತುಕೊಂಡು ಅವನಿಗೆ ತನ್ನ ಪಕ್ಕದಲ್ಲಿ ಕುಳಿತುಕೊಳ್ಳಲು ಕರೆದಳು.

ಅವನು ಮೆಲ್ಲಗೆ ನಡೆದು ಅವಳ ಪಕ್ಕದಲ್ಲಿ ಆಸೀನನಾದ. ಮುದುಕಿ ಟೀಯನ್ನು ಬಟ್ಟಲಿಗೆ ಹುಯ್ದು ಅವನ ಕೈಗಿತ್ತಳು.

"ಈ ಹಿತವಾದ ಬೆಚ್ಚಗಿನ ರೂಮಿನಲ್ಲಿಯೇ ಇಡೀ ರಾತ್ರಿಯನ್ನು ಕಳೆಯೋಣ ಅಂತ ಅನಿಸ್ತಾ ಇದೆ." ಎಂದ ಬಿಲ್ಲಿ.

ಅವರಿಬ್ಬರೂ ಸ್ವಲ್ಪ ಸಮಯ ಮಾತನಾಡದೇ ಮೌನವಾಗಿ ಟೀ ಹೀರುತ್ತಾ ಹಾಗೇ ಕುಳಿತುಕೊಂಡರು. ಆದರೂ ಮುದುಕಿಯ ಕಣ್ಣುಗಳು ತನ್ನನ್ನೇ ಗಮನಿಸುತ್ತಿರುವಂತೆ ಅವನಿಗೆ ಭಾಸವಾಗತೊಡಗಿತು. ಅವಳು ಕೊಂಚವೇ ಅವನೆಡೆಗೆ ತಿರುಗಿದ್ದಳು. ಅವಳ ಕಡೆಯಿಂದ ಯಾವುದೋ ಒಂದು ಅಪರಿಚಿತ ವಾಸನೆ ಅವನ ಮೂಗಿಗೆ ಸೂಕ್ಷ್ಮವಾಗಿ ಅಡರುತ್ತಿತ್ತು. ಆದರೂ ಅದು ಅವನಿಗೆ ಅನಪೇಕ್ಷಣೀಯವೆನಿಸಲಿಲ್ಲ. ಅದು ಅವನ ಮೂಗಿಗೆ ಯಾವುದೋ ವಾಸನೆಯ ನೆನಪನ್ನು ಕೆದಕಿತು. ಉಪ್ಪಿನ ಕಾಯಿಯ ಮಸಾಲೆ? ತಾಜಾ ಚರ್ಮ? ಆಸ್ಪತ್ರೆಯ ದ್ರಾವಣ? ಅವನಿಗೆ ಒಂದೂ ನೆನಪಾಗಲಿಲ್ಲ.